# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಹೆಚ್. ರಸ್ತೆ, ತುಮಕೂರು-572 103 ☏:0816 - 2255650,2273511 ಫ್ಯಾಕ್ಸ್:0816-2270719

ಸಂಖ್ಯೆ:ತುವಿ:ಪವಿ:2025-26: 475 ದಿನಾಂಕ:10.09.2025

# : ನೆನಪೋಲೆ :

**ವಿಷಯ** : ಸೇವಾ ವಿವರಗಳನ್ನು ಸಲ್ಲಿಸುವಂತೆ ಮತ್ತೊಮ್ಮೆ ತಿಳಿಸುತ್ತಿರುವ ಬಗ್ಗೆ.

**ಉಲ್ಲೇಖ** : ಈ ಕಚೇರಿ ಸುತ್ತೋಲೆ ಸಂಖ್ಯೆ:ತುವಿ:ಪವಿ:2025-26:417 ದಿನಾಂಕ:20.08.2025

* * * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, 2025-26 ನೇ ಶೈಕ್ಷಣಿಕ ಸಾಲಿಗೆ ವಿವಿಧ ಸ್ನಾತಕ ಪದವಿಗಳ ಪರೀಕ್ಷಾ ಮತ್ತು ಮೌಲ್ಯಮಾಪನ ಕಾರ್ಯಗಳಿಗೆ ಅಧ್ಯಾಪಕರುಗಳ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಬೇಕಾಗಿದ್ದು, ಈ ಸಂಬಂಧ ಪ್ರಸ್ತುತ ತಮ್ಮ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ, ಪೂರ್ಣಕಾಲಿಕ ಹಾಗೂ ಅರೆಕಾಲಿಕ ಅತಿಥಿ ಉಪನ್ಯಾಸಕರುಗಳ ವಿವರಗಳನ್ನು ಉಲ್ಲೇಖಿತ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಗಳಲ್ಲಿ ಸಿದ್ಧಪಡಿಸಿ **ದಿನಾಂಕ:06.09.2025 ರೊಳಗೆ ಮಾನ್ಯ ಕುಲಸಚಿವರು(ಮೌಲ್ಯಮಾಪನ), ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು**-572 103 ಇವರಿಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿತ್ತು. ಆದಾಗ್ಯೂ ಇದುವರೆವಿಗೂ ಹಲವಾರು ಕಾಲೇಜುಗಳಿಂದ ಮಾಹಿತಿಯು ಪರೀಕ್ಷಾ ವಿಭಾಗಕ್ಕೆ ಸ್ವೀಕೃತಿಯಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸೇವಾ ವಿವರಗಳನ್ನು **ದಿನಾಂಕ:13.09.2025 ರೊಳಗೆ ಕಡ್ಡಾಯವಾಗಿ** ಸಲ್ಲಿಸುವಂತೆ ಮತ್ತೊಮ್ಮೆ ತಮಗೆ ಸೂಚಿಸುತ್ತಾ ತದನಂತರ ಸಲ್ಲಿಸುವ ಸೇವಾ ವಿವರಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸುವುದಿಲ್ಲ ಹಾಗೂ ಮುಂದಿನ ಆಗು-ಹೋಗುಗಳಿಗೆ ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳೇ ನೇರ ಹೊಣೆಗಾರರಾಗಿರುತ್ತೀರಿ ಎಂಬುದನ್ನು ಈ ಮೂಲಕ ತಮಗೆ ತಿಳಿಸಲಾಗಿದೆ.

10/9/25

**ಕುಲಸಚಿವರು(ಪರೀಕ್ಷಾಂಗ)**

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

**ಪ್ರಾಂಶುಪಾಲರು, ಘಟಕ/ಎಲ್ಲಾ ಸಂಯೋಜಿತ ಸ್ನಾತಕ ಪದವಿ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.**

**ಪ್ರತಿಗಳು** :

1. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - **ಇಂದೇ ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು ಹಾಗೂ ಎಲ್ಲಾ ಸ್ನಾತಕ ಪದವಿ ಕಾಲೇಜುಗಳಿಗೆ ಇ-ಮೇಲ್ ಕಳುಹಿಸುವುದು.**
2. ಕಛೇರಿ ಪ್ರತಿ.